ಈ) ಗ್ರೂಪ್ 'ಸಿ' – 52 ಹುದ್ದೆಗಳನ್ನು ಭರ್ತಿಮಾಡಲು ಈಗಾಗಲೇ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಹಾಗೂ ಖಾಲಿ ಇರುವ ಗ್ರೂಪ್ 'ಡಿ' – 26 ಹುದ್ದೆಗಳಿಗೆ ಟೆಂಡರ್ ಮುಖಾಂತರ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗಿದೆ.

ಗ್ರೂಪ್ 'ಎ' ಹುದ್ದೆಗಳನ್ನು ಭರ್ತಿಮಾಡಲು ನಿಯಮಾನುಸಾರ ಕ್ರಮವಹಿಸಲಾಗುತ್ತಿದೆ.

ಉ) ಮತ್ತು ಊ) ಆಸ್ಪತ್ರೆಯಲ್ಲಿ ಅವಶ್ಯವಿರುವ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ವಿಶ್ರಾಂತಿ ನಿಲಯ ಹಾಗೂ ಇತರೆ ಸೌಕರ್ಯಗಳನ್ನು ಕಲ್ಪಿಸಲಾಗಿದ್ದು, ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತದೆ.

ಐ.ಟಿ. ಪಾರ್ಕ್‌ಗಳ ಸ್ಥಾಪನೆ ಕುರಿತು

5121 (5683); ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ)

ಅ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಐ.ಟಿ. ಪಾರ್ಕ್‌ಗಳನ್ನು ಸ್ಥಾಪಿಸಲು ಸರ್ಕಾರ ಮುಂದಾಗಿದೆ; ಈ ಮೊದಲು ಸ್ಥಾಪಿಸಿರುವ ಐಟಿ ಪಾರ್ಕ್‌ಗಳ ಸ್ಥಿತಿಗತಿಗಳೇನು? (ವಿವರಗಳನ್ನು ನೀಡುವುದು);

ಆ) ಈ ಪೈಕಿ ಕೆಲವು ಪ್ರತಿಷ್ಠಿತ ಕಂಪನಿಗಳು ಸದರಿ ಸ್ಥಳಕ್ಕೆ ಬರಲು ಹಿಂದೇಟು ಹಾಕಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಕಾರಣಗಳೇನು;

ಇ) ಐ.ಟಿ. ಪಾರ್ಕ್‌ಗಳು ಖಾಲಿ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಇದರಿಂದ ಸರ್ಕಾರದ ಉದ್ದೇಶಕ್ಕೆ ಹಿನ್ನಡೆಯಾದಂತಾಗುವುದಿಲ್ಲವೇ; (ವಿವರಗಳನ್ನು ಒದಗಿಸುವುದು)

ಉ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಪ್ರಸ್ತುತ ರಾಜ್ಯದ ಬಾಗಲಕೋಟೆ ಜಿಲ್ಲೆಯಲ್ಲಿ ಕಿಯೊನಿಕ್ಸ್ ವತಿಯಿಂದ ಐ.ಟಿ.ಪಾರ್ಕ್‌ನ್ನು ಸ್ಥಾಪಿಸಲು ಉದ್ದೇಶಿಸಿದೆ.

ಈಗಾಗಲೇ ಹುಬ್ಬಳ್ಳಿಯಲ್ಲಿ ಸರ್ಕಾರದ ವತಿಯಿಂದ ಐಟಿ ಪಾರ್ಕ್ ಸ್ಥಾಪನೆ ಮಾಡಿ ಅದರ ನಿರ್ವಹಣೆಯ ಕಾರ್ಯವನ್ನು ಕಿಯೊನಿಕ್ಸ್ ಸಂಸ್ಥೆಗೆ ವಹಿಸಲಾಗಿದೆ. ಶಿವಮೊಗ್ಗ ಹಾಗೂ ಕಲಬುರ್ಗಿ ಪಟ್ಟಣಗಳಲ್ಲಿ ಕಿಯೊನಿಕ್ಸ್ ವತಿಯಿಂದ ಐ.ಟಿ. ಪಾರ್ಕ್‌ಗಳನ್ನು ಸ್ಥಾಪಿಸಲಾಗಿದೆ. ಅದರ ವಿವರಗಳು ಈ ಕೆಳಗಿನಂತಿವೆ.

1. ಹುಬ್ಬಳ್ಳಿ ಐಟಿ ಪಾರ್ಕನ್ನು 2002ರಲ್ಲಿ ಪ್ರಾರಂಭಿಸಲಾಗಿದೆ. ಸದ್ಯಕ್ಕೆ ಒಟ್ಟು 1,87,146 ಚ.ಅಡಿಯಲ್ಲಿ 1,63,003 ಚ.ಅಡಿಯನ್ನು 61 ಕಂಪನಿಗಳಿಗೆ ಹಂಚಿಕೆ ಮಾಡಲಾಗಿದೆ ಹಾಗೂ ಸುಮಾರು 1700 ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ.

2. ಶಿವಮೊಗ್ಗ ಐ.ಟಿ.ಪಾರ್ಕನ್ನು 2012ರಲ್ಲಿ ಕಿಯೊನಿಕ್ಸ್ ಮುಖಾಂತರ ಸ್ಥಾಪಿಸಲಾಗಿದೆ. ಸದ್ಯಕ್ಕೆ ಒಟ್ಟು ಚ.ಅಡಿಯಲ್ಲಿ, 42,300 ಚ.ಅಡಿಯನ್ನು 11 ಕಂಪನಿಗಳಿಗೆ ಹಂಚಿಕೆ ಮಾಡಲಾಗಿದೆ. ಸುಮಾರು 450 ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ.

3. ಕಲಬುರ್ಗಿ ಐ.ಟಿ.ಪಾರ್ಕನ್ನು 2012 ರಲ್ಲಿ ಕಿಯೊನಿಕ್ಸ್ ಮುಖಾಂತರ ಸ್ಥಾಪಿಸಲಾಗಿದೆ. ಸದ್ಯಕ್ಕೆ ಒಟ್ಟು 53,444 ಚ.ಅಡಿಯಲ್ಲಿ 37,049 ಚ.ಅಡಿಯನ್ನು 10 ಕಂಪನಿಗಳಿಗೆ ಹಂಚಿಕೆ ಮಾಡಲಾಗಿದೆ. ಸುಮಾರು 120 ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ.

ಅ) ಕೆಲವು ಪ್ರತಿಷ್ಠಿತ ಕಂಪನಿಗಳು ಸದರಿ ಸ್ಥಳಕ್ಕೆ ಬರಲು ಹಿಂದೇಟು ಹಾಕಿರುವ ನಿರ್ದಿಷ್ಟ ಪ್ರಕರಣಗಳು ವರದಿಯಾಗಿರುವುದಿಲ್ಲ. ಆದರೂ ಸಹ ಸಮರ್ಪಕ ವಾಯುಮಾರ್ಗ ಹಾಗೂ ಮೆಟ್ರೋಪಾಲಿಟನ್ ನಗರದ ವಾತಾವರಣ 2ನೇ ಹಂತದ ನಗರಗಳಲ್ಲಿ ಲಭ್ಯವಿಲ್ಲದಿರುವುದು ಕೆಲವು ಐಟಿ ಕಂಪನಿಗಳು ಬೆಂಗಳೂರಿನ ಹೊರಗಡೆ ಹೋಗಲು ಹಿಂದೇಟು ಹಾಕಲು ಕಾರಣವಾಗಿವೆಯೆಂದು ಅಂದಾಜಿಸಿದೆ.

ಇ) ಐ.ಟಿ.ಪಾರ್ಕ್‌ಗಳ ಪೈಕಿ ಹುಬ್ಬಳ್ಳಿ ಐ.ಟಿ.ಪಾರ್ಕ್‌ನಲ್ಲಿ ಸುಮಾರು ಶೇಕಡ 95ರಷ್ಟು ಸ್ಥಳವಕಾಶವನ್ನು ಹಂಚಿಕೆ ಮಾಡಲಾಗಿರುತ್ತದೆ. ಉಳಿದಂತೆ ಕಲಬುರ್ಗಿ ಐ.ಟಿ.ಪಾರ್ಕ್‌ನಲ್ಲಿ ಸುಮಾರು ಶೇಕಡ 70 ಹಾಗೂ ಶಿವಮೊಗ್ಗ ಐ.ಟಿ.ಪಾರ್ಕ್‌ನಲ್ಲಿ ಸುಮಾರು ಶೇಕಡ 60 ಸ್ಥಳವಕಾಶ ಹಂಚಿಕೆ ಮಾಡಲಾಗಿರುತ್ತದೆ.

ಈ) ಪ್ರಸ್ತುತ ಹುಬ್ಬಳ್ಳಿ ಐ.ಟಿ.ಪಾರ್ಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ 61 ಕಂಪನಿಗಳಿಂದ ಸುಮಾರು 1,700 ಉದ್ಯೋಗ ಸೃಷ್ಠಿ ಆಗಿರುತ್ತದೆ. ಅದೇ ರೀತಿ ಕಲಬುರ್ಗಿ ಐ.ಟಿ. ಪಾರ್ಕ್‌ನಿಂದ ಸುಮಾರು 120 ಹಾಗೂ ಶಿವಮೊಗ್ಗ ಐ.ಟಿ. ಪಾರ್ಕ್‌ನಿಂದ 450 ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಉದ್ಯೋಗ ಸೃಷ್ಠಿ ಮತ್ತು ಅಭಿವೃದ್ಧಿಯ ಉದ್ದೇಶಕ್ಕೆ ಹಿನ್ನೆಡೆಯಾಗುತ್ತಿರುವುದು ಕಂಡುಬರುತ್ತಿಲ್ಲ.

ಉ) ಈ ಬಗ್ಗೆ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಖಾಲಿಯಿರುವ ಸ್ಥಳಾವಕಾಶಕ್ಕೆ ಕಂಪನಿಗಳನ್ನು ಆಕರ್ಷಿಸಲು ರಿಯಾಯಿತಿ ದರದಲ್ಲಿ ಬಾಡಿಗೆ ನೀಡಲು ಕ್ರಮಕೈಗೊಳ್ಳಲಾಗುತ್ತಿದೆ;

2. ರಾಜ್ಯದ 2ನೇ ಹಂತದ ನಗರಗಳಲ್ಲಿ ಉದ್ಯಮ ಸ್ಥಾಪಿಸುವ ಉದ್ಯಮಿಗಳಿಗೆ ಸರ್ಕಾರವು ಹೊರಡಿಸಿರುವ i4 ಪಾಲಿಸಿಯನ್ವಯ ಈ ಕೆಳಕಂಡ ವಿನಾಯ್ತಿ / ರಿಯಾಯಿತಿಗಳನ್ನು ನೀಡಿ ಪ್ರೋತ್ಸಾಹಿಸಲಾಗುವುದು;

   a) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊರ ವಲಯದಲ್ಲಿ ಉತ್ತೇಜನಾಧಾರಿತ ಭೂ ಹಂಚಿಕೆ;
   b) Start-up ಕಂಪನಿಗಳನ್ನು ಪ್ರಾರಂಭಿಸಲು ರಿಯಾಯಿತಿ ದರದ ಬಾಡಿಗೆ;
   c) ಕರ್ನಾಟಕ ಕೈಗಾರಿಕಾ ಉದ್ಯೋಗ, ಆದೇಶ ನಿಯಮ 1946 ರಿಂದ IT/ITes/Knowledge/Start-up ಕಂಪನಿಗಳಿಗೆ ವಿನಾಯ್ತಿ
   d) IT/ITes/start-ups etc ಗಳನ್ನು ಅವಶ್ಯಕ ಸೇವೆಗಳಾಗಿ ಪರಿಗಣನೆ;
   e) 2ನೇ ಹಾಗೂ 3ನೇ ಹಂತದ ನಗರಗಳಿಗೆ ಪಿಎಫ್ ಹಾಗೂ ಇ.ಎಸ್.ಐ ವಂತಿಗೆಯ ಹಿಂಪಾವತಿ;
   f) ವಿದ್ಯುತ್‌ಚ್ಛಕ್ತಿ ದರದಲ್ಲಿ ರಿಯಾಯಿತಿ;
   g) ಸ್ಟ್ಯಾಂಪ್ ಶುಲ್ಕದಲ್ಲಿ ವಿನಾಯಿತಿ.